

ಡಾ.ವಿನೋದ ಛೆಬ್ಬಿ

ನನ್ನ ಗಂಡಸುತನ ಹಾಗೂ ನಿನ್ನ ಗಂಡಸುತನದ ನಡುವೆ ವ್ಯತ್ಯಾಸವಿದೆ ಎನ್ನಲು ಗಂಡಸರು ಕಲಿಯಬೇಕು.

# 200: ಪುರುಷರ ನಾಕನರಕ-9

ಪುರುಷ ಪ್ರಧಾನ ದಂಪತಿಯ ಕಾಮಕೂಟದಲ್ಲಿ ಹೆಣ್ಣಿನ ಸುಖವು ಹೆಚ್ಚಿನಂಶ ಗಂಡು ಕೊಡುವ ಕೌಟುಂಬಿಕ ಭದ್ರತೆಯಿಂದ ಬರುತ್ತದೆ; ಹಾಗಾಗಿ ಕಾಮದಲ್ಲಿ ಸಿಕ್ಕಿದ್ದೇ ಪರಮ ತೃಪ್ತಿ ಎಂದು ಹೆಣ್ಣು ಭಾವಿಸುವ ಸಂಭವವಿದೆ ಎಂದು ಹೇಳುತ್ತಿದ್ದೆ.

ಇಷ್ಟರಲ್ಲಿ ನನಗೊಂದು ಪ್ರಶ್ನೆ ಬಂತು. ನಮ್ಮ ಸಂಸ್ಕೃತಿಯ ಪುಟಗಳಲ್ಲಿ ಹೆಣ್ಣಿಗೆ ಎಲ್ಲಿಲ್ಲದಂತೆ ಗೌರವದ ಸ್ಥಾನವಿದೆ. ಆದರೆ ನಿತ್ಯದ ಬದುಕಿನಲ್ಲಿ ಸ್ವಂತ ಅಸ್ಮಿತೆಗೇ ಹೆಜ್ಜೆಹೆಜ್ಜೆಗೂ ಹೋರಾಡಬೇಕಾಗಿ ಬಂದಿದೆ. ನಮ್ಮಲ್ಲಷ್ಟೇ ಅಲ್ಲ, ಸ್ವಿಝರ್‌ಲ್ಯಾಂಡ್ ನಂಥ ದೇಶಗಳಲ್ಲೂ ಹೆಣ್ಣಿಗೆ ಸಮಾನತೆ ಇಲ್ಲ. ಹೆಣ್ಣನ್ನು ಎರಡನೆಯ ದರ್ಜೆಯವಳನ್ನಾಗಿ ನೋಡುವುದು ಎಲ್ಲಿಂದ, ಹೇಗೆ ಬಂತು?

ಆದಿಮಾನವರ ಇತಿಹಾಸದಲ್ಲಿ ಸುಮಾರು 1015 ಸಾವಿರ ವರ್ಷಗಳಿಗೂ ಮುಂಚೆ ಪುರುಷರಿಗೇ ಪ್ರಾಧಾನ್ಯತೆ ಎಂದಿರಲಿಲ್ಲ. ಜಗತ್ತಿನಾದ್ಯಂತ ಎಲ್ಲರೂ ಪ್ರಕೃತಿಯನ್ನೂ ಭೂಮಿಯನ್ನೂ ತಾಯಿ ಎಂದು ಪೂಜಿಸುತ್ತಿದ್ದರು. ಹಾಗೆಯೇ ಹೆಣ್ಣಿಗೂ (ಸಂತಾನವನ್ನು ಹೊರುವ ಸಾಮರ್ಥ್ಯದ ಕಾರಣದಿಂದ) ಸೃಷ್ಟಿಕರ್ತೆಯ ಸ್ಥಾನವಿತ್ತು ಎನ್ನುವುದಕ್ಕೆ ಆಧಾರವಿದೆ. ಆಗ ಗಂಡಸರು ಬೇಟೆಗಾಗಿ ಅಲೆಯುತ್ತಿದ್ದರೆ ಹೆಂಗಸರು ಕಾಯಿಬೀಜಗಳನ್ನು, ಗಡ್ಡೆಗೆಣಸುಗಳನ್ನು ಹುಡುಕಿಕೊಂಡು (huntergatherer) ಅಲೆಯುತ್ತಿದ್ದರು. ಬರುಬರುತ್ತ ಆವಾಸದ ಹತ್ತಿರವೇ ಗಿಡಮರಗಳನ್ನು ಬೆಳೆಯುವ ಪದ್ಧತಿ ಶುರುವಾಗಿ, ಅದೇ ಹತ್ತು ಸಾವಿರ ವರ್ಷಗಳ ಹಿಂದೆ ಕೃಷಿಯ ರೂಪ ತಳೆಯಿತು. ಕೃಷಿಯನ್ನು ಕಂಡುಹಿಡಿದದ್ದು ಹೆಂಗಸರೇ ಎಂದು ಜೆರ್ಡಾ ಲರ್ನರ್, ಎಲೀ ಬೌಲ್ಡಿಂಗ್ ಮುಂತಾದ ತಜ್ಞರು ಸಾಧಿಸುತ್ತಾರೆ. ಹೀಗೆ ಹೆಂಗಸು ಪ್ರಕೃತಿಮಾತೆ, ಭೂಮಿತಾಯಿಯಂತೆ 'ಎಲ್ಲವನ್ನೂ ಕೊಡುವವಳು' ಆಗಿ, ಮಾನವರ ಸೃಷ್ಟಿಕರ್ತೆ ಎಂದು ಮಹತ್ವ ಪಡೆದುಕೊಂಡಳು. ಕೃಷಿಯ ಜೊತೆಗೆ ಪ್ರಾಣಿ ಸಾಕಾಣಿಕೆಯೂ ಸುಲಭದ ಮಾಂಸಮೂಲವಾಗುತ್ತ, ಬೇಟೆಯಾಡುವ ಅಗತ್ಯವಿಲ್ಲದೆ ಗಂಡಸರು ಮಹತ್ವ ಕಳೆದುಕೊಂಡರು.

ಕೃಷಿ ಹಾಗೂ ಪ್ರಾಣಿ ಸಾಕಾಣಿಕೆಯಿಂದ ಆಹಾರವು ಸುಲಭವಾಗಿ, ನಿಶ್ಚಿತವಾಗಿ ಸಿಗುವ ವಿಧಾನವು ಅಪಾಯಕರ ಬೇಟೆಗೆ ಪರ್ಯಾಯವಾಗಿ ಗಂಡಸರ ಗಮನ ಸೆಳೆಯಿತು. ಅವರೂ ಕೃಷಿಗೆ ಕೈಹಚ್ಚಿದರು. ಕ್ರಮೇಣ ಹೆಂಗಸರ ಜಾಗ ಆಕ್ರಮಿಸಿದರು. ಆಗ ಹುಟ್ಟಿದ್ದೇ ನೇಗಿಲು. ನೇಗಿಲಿನಿಂದ ನೆಲವನ್ನು ಅಗೆದು ಬೀಜ ಬಿತ್ತುವ ಕಾಯಕ ಶುರುವಾಗಿದ್ದು ಸುಮಾರು ಏಳು ಸಾವಿರ ವರ್ಷಗಳ ಹಿಂದೆ. ಅಲ್ಲಿಂದ (ಭಾರವಾದ) ನೇಗಿಲನ್ನು ಹೊರುವುದು, ಅದರಿಂದ ಭೂಮಿಯನ್ನು ಉಳುವುದು, ಉಂಟಾದ ಕೊರೆಗಳಲ್ಲಿ ಬೀಜ ಬಿತ್ತುವುದು ಗಂಡಸರ ಕೆಲಸವಾಯಿತು. ಆಗ ಗಂಡಸರು ಭೂಮಿಯಲ್ಲಿ ಮಾಡಿದ ಕೊರೆಗೂ ಹೆಣ್ಣಿನ ತೊಡೆಗಳ ನಡುವಿನ ಕೊರೆಗೂ ಸಾಮ್ಯತೆ ಕಂಡರು, ನೇಗಿಲಿಗೂ ಶಿಶ್ನಕ್ಕೂ ಸಾಮ್ಯತೆ ಕಂಡರು. ಹೀಗೆ ಹೆಣ್ಣಿನ 'ಕೊರೆ'ಯಲ್ಲಿ ಗಂಡು 'ಬೀಜ ಬಿತ್ತುವ' ಪ್ರಸ್ತಾಪವು ಜಗತ್ತಿನ ಎಲ್ಲ ಧಾರ್ಮಿಕ ಗ್ರಂಥಗಳಲ್ಲೂ ಉಲ್ಲೇಖವಾಗಿದೆ. (ಉದಾ. 'ಸೀತಾ' ಎಂದರೆ ನೇಗಿಲಿನಿಂದ ಭೂಮಿಯಲ್ಲಿ ಮಾಡಿದ ಕೊರೆ ಎಂದರ್ಥ; ಭೂಮಿಯನ್ನು ಉಳುವಾಗ ಸೀತೆ ಹುಟ್ಟಿದಳೆಂದು ಐತಿಹ್ಯವಿದೆ.) ಹಾಗೆಯೇ ಪ್ರಕೃತಿಮಾತೆ, ಭೂಮಿತಾಯಿ, ಹೆಣ್ಣು ಮುಂತಾದ ಸ್ತ್ರೀ ಸಂಕೇತಗಳನ್ನು ಹಿಂದಿಕ್ಕಿ, ಪುರುಷ ಪ್ರಾಧಾನ್ಯತೆಯನ್ನು ಮೆರೆಸುವ 'ದೇವರು' ಎನ್ನುವ ಗಂಡಸು ಪ್ರಪಂಚದ ಸೃಷ್ಟಿಕರ್ತ ಎಂಬ ಪರಿಕಲ್ಪನೆ ಹುಟ್ಟಿತು. ಹೆಣ್ಣು ಗಂಡಿನಿಂದ ಬೀಜ ಬಿತ್ತಿಸಿಕೊಳ್ಳಬೇಕು ಎಂಬ ಆದೇಶ ಇನ್ನೂ ಮುಂದೆಹೋಗಿ, ಹೆಣ್ಣಿನ ಗರ್ಭದ ಯಜಮಾನಿಕೆಯನ್ನು ಗಂಡಿಗೆ ವಹಿಸಲಾಯಿತು. ಬೀಜ ನೆಡುವ – ಅಂದರೆ ಸಂಭೋಗದ ಕಾರ್ಯಕ್ಷಮತೆಯು ಗಂಡಿನ ಸಾಮರ್ಥ್ಯದ ಅಳತೆಗೋಲಾದರೆ, ಅದರ ಪರಿಣಾಮವಾದ ಗರ್ಭಧಾರಣೆಯು ಹೆಂಗಸಿನ ಸಾಮರ್ಥ್ಯದ ಒರೆಗಲ್ಲಾಯಿತು. ಹೀಗೆ ಶಿಶ್ನವು ಈಶ್ವರ ಲಿಂಗವಾಗಿ ಪೂಜನೀಯವಾಯಿತು. (ಇದೇ ಕಾಲಕ್ಕೆ ಅರ್ಧನಾರೀಶ್ವರ ಹಾಗೂ ಸ್ತ್ರೀದೇವತೆಗಳ ಕಲ್ಪನೆಗಳು ಹುಟ್ಟಿಕೊಂಡರೂ ಗಂಡುದೇವರಿಗೆ ಸಂಬಂಧವಿರದ ಸ್ವತಂತ್ರ ದೇವಿಯರು ಕಾಣುವುದಿಲ್ಲ.) ಇಲ್ಲಿಂದಲೇ (ಗಂಡಿನ ದೋಷವಿದ್ದರೂ) ಮಕ್ಕಳಾಗದ ಹೆಣ್ಣನ್ನು ಬಂಜರು ಭೂಮಿಗೆ ಹೋಲಿಸಿ, ಮಕ್ಕಳಾದವರನ್ನು (ಗಂಡಿಲ್ಲದೆ ಗರ್ಭ ಧರಿಸಲು ಆಗದವಳೆಂದು) ಎರಡನೆಯ ದರ್ಜೆಗೆ ಇಳಿಸಲಾಯಿತು. ಸಂತಾನಕ್ಕಾಗಿ ಗಂಡಸರು ಬಹುಪತ್ನಿತ್ವ ಅನುಸರಿಸಿದರು. ಹೀಗೆ ಗಂಡಸರು ತಮ್ಮ ಸಾಮರ್ಥ್ಯವನ್ನು ಸಂಭೋಗದ ಶಕ್ತಿಯಿಂದ ಅಳೆಯುತ್ತ, ಯೋನಿಯನ್ನೇ ಗುರಿಮಾಡಿಕೊಳ್ಳುತ್ತ ಸಂಭೋಗವನ್ನೂ ಅತ್ಯಾಚಾರವನ್ನೂ ನಡೆಸುವ ಮನೋಭಾವ ಬೆಳೆಸಿಕೊಂಡಿದ್ದು, ಎರಡರಿಂದಲೂ ಹೆಣ್ಣಿನ ಮೇಲೆ ಪ್ರಾಬಲ್ಯ ಸಾಧಿಸುತ್ತಿದ್ದಾರೆ. ಹಾಗಾಗಿಯೇ ನಾವು ನಮ್ಮ ತಾಯಿಯನ್ನು ಗೌರವಿಸುತ್ತೇವೆಯೇ ಹೊರತು ನಮ್ಮ ಮಕ್ಕಳ ತಾಯಿಯನ್ನಲ್ಲ! ಪರಿಣಾಮವಾಗಿ ಹೆಣ್ಣು ಸಂತಾನೋತ್ಪತ್ತಿಯ ಮೂಲಕ ಭದ್ರತೆ ಹಾಗೂ ಅಸ್ಮಿತೆಯನ್ನು (identity) ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಬಂದಿದೆ.

ಹೀಗೆ ಮುಂಚೆ ಹೆಣ್ಣುಗಂಡುಗಳ ನಡುವೆಯಿದ್ದ ಸಮನ್ವಯ ಮಾಯವಾಗಿ ಗಂಡು ಮೇಲುಗೈ ಸಾಧಿಸಿದಂತೆ ಕಂಡರೂ ಇದು ಸಾಕಷ್ಟು ಸಮಸ್ಯೆಗಳಿಗೆ ಮೂಲವಾಗಿ ಗಂಡಿಗೇ ತಿರುಗುಬಾಣ ಆಗಿದೆ (ವಿವರಕ್ಕೆ ಕಂತು192–197 ನೋಡಿ). ಗಂಡು ಒಂದು ಕಡೆ ಹೆಣ್ಣಿನೊಂದಿಗೆ ಭಾವನಾತ್ಮಕ ನಂಟು ಬೆಳೆಸಲು ಅಡ್ಡಿ ಮಾಡಿಕೊಂಡಿದ್ದು, ಇನ್ನೊಂದು ಕಡೆ ತನ್ನ ಕಾಮುಕ ಭ್ರಮೆ ಬಯಕೆಗಳನ್ನು ಇಟ್ಟುಕೊಂಡು ಅವಳನ್ನು ಸಮೀಪಿಸುತ್ತಾನೆ. ಹಾಗಾಗಿ ಹೆಣ್ಣಿನೊಡನೆ ಒತ್ತಟ್ಟಿಗಿರಲಿ, ತನ್ನೊಂದಿಗೇ ತಾನು ಸಮನ್ವಯ ಸಾಧಿಸಲಾಗದೆ ಒದ್ದಾಡುತ್ತಿದ್ದಾನೆ. ಇದೊಂದು ರೀತಿ ಮೆರೆಯಲು ಕಿರೀಟವನ್ನು ಧರಿಸಿ, ನಂತರ ಅದರ ಭಾರ ಹೊರಲಾಗದೆ, ತಲೆಯಿಂದ ತೆಗೆಯಲೂ ಆಗದೆ ವಿಶ್ರಮಿಸಲು ಒದ್ದಾಡುವಂತೆ ಆಗಿದೆ.

ಇದಕ್ಕೆ ಉಪಾಯವೇನು? ಪರಂಪರೆಯಿಂದ ಬಂದು ಜಡ್ಡುಗಟ್ಟಿದ ಗಂಡಸುತನ ಬೇಕೋ ಅಥವಾ ಹೆಣ್ಣಿನೊಡನೆ ಬಾಂಧವ್ಯವನ್ನು ಊರ್ಜಿತಗೊಳಿಸುವ ಗಂಡಸುತನ ಬೇಕೋ ಎನ್ನುವುದನ್ನು ಪ್ರತಿ ಗಂಡೂ ವೈಯಕ್ತಿಕವಾಗಿ ನಿರ್ಧರಿಸಬೇಕು. ಇಷ್ಟುದಿನ ನಂಬಿಕೊಂಡದ್ದನ್ನು ಕೈಬಿಟ್ಟು ಗೊತ್ತಿಲ್ಲದ ಇನ್ನೊಂದನ್ನು ಅನುಸರಿಸುವುದು ಖಂಡಿತವಾಗಿಯೂ ಕಠಿಣ ಪರೀಕ್ಷೆಯಾದರೂ ಎದುರಿಸಲೇಬೇಕು. ಯಾಕೆಂದರೆ ಇಂಥದ್ದನ್ನು ಸೀತೆ ದ್ರೌಪದಿಯರಿಂದ ಹಿಡಿದು ಬಹುತೇಕ ಎಲ್ಲ ಸ್ತ್ರೀಯರೂ ಎಲ್ಲ ಕಾಲದಲ್ಲೂ ಎದುರಿಸುತ್ತಲೇ ಬಂದಿದ್ದಾರೆ.

ಗಂಡಸುತನದ ಹೊಸ ಮಾದರಿ ಹೇಗಿರಬೇಕು? ಆಕ್ರಮಣಕಾರಿ ಆಗದೆ ಬಾಂಧವ್ಯಕಾರಿ ಆಗಿರಬೇಕು. ಪಾರಮ್ಯದ ಬದಲು ಸಮನ್ವಯವನ್ನೂ ಕರ್ತವ್ಯದ ಜೊತೆಗೆ ನಂಟಿನ ಭಾವವನ್ನೂ ಬೆಳೆಸಿಕೊಳ್ಳಬೇಕು. ಹೆಣ್ಣಿಗೆ ಅನವಶ್ಯಕ ಸಹಾಯ ಮಾಡಲು ಧಾವಿಸದೆ, ಬುದ್ಧಿ ಹೇಳಲು ಹೋಗದೆ, ಅಂಕೆಯಲ್ಲಿ ಇಟ್ಟುಕೊಳ್ಳಲು ಯತ್ನಿಸದೆ, ಆಕೆಯ ಪ್ರಭಾವಕ್ಕೆ ಒಳಗಾಗಲು ಕಲಿಯಬೇಕು. (ಮದುವೆಯ ಹೊಸದರಲ್ಲಿ ಹೆಂಡತಿಯ ಮೇಲೆ ಅಧಿಕಾರ ನಡೆಸುತ್ತಿದ್ದವರು ಕ್ರಮೇಣ ಆಕೆಯನ್ನು ಅನುಸರಿಸುತ್ತ ಸುಖ ಕಾಣುತ್ತಿರುವುದರ ಗುಟ್ಟು ಇಲ್ಲಿದೆ.) ಸ್ತ್ರೀವಾದವನ್ನು ಒಪ್ಪಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ಮನದೊಳಗೆ ಹುಟ್ಟುವ ದೌರ್ಬಲ್ಯ, ಅಸಾಮರ್ಥ್ಯ, ಕೀಳರಿಮೆ, ಭಯ ಮುಂತಾದ ಭಾವನೆಗಳನ್ನು ಇರುವಂತೆಯೇ ವ್ಯಕ್ತಪಡಿಸಬೇಕು. ಬೇಕೆನಿಸಿದರೆ ಗಟ್ಟಿಯಾಗಿ ಅಳಬೇಕು. ಆಗ ಯಾರಾದರೂ ಗಂಡಸು ಮೀಸೆ ಕುಣಿಸುತ್ತ ನೀನೆಂಥ ಗಂಡಸೋ ಎಂದು ಕೆಣಕಿದರೆ, 'ನನ್ನ ಗಂಡಸುತನ ಹಾಗೂ ನಿನ್ನ ಗಂಡಸುತನದ ನಡುವೆ ವ್ಯತ್ಯಾಸವಿದೆ' ಎಂದು ಎದೆತಟ್ಟಿಕೊಂಡು ಹೇಳಲು ಕಲಿಯಬೇಕು. ಗಂಡಸುತನ ಒಂದೇ ಆಗಿರದೆ ಹಲವಾರು ಛಾಯೆಗಳನ್ನು ಒಳಗೊಂಡಿದೆ ಎಂಬುದನ್ನು ಅರ್ಥಮಾಡಿಕೊಂಡು ಆಚರಣೆಯಲ್ಲಿ ತರಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ, ಗಂಡು ಹೆಣ್ಣಿನ ಗೆಳೆಯನಾಗುವುದರ ಬದಲು ಗೆಳತಿಯಾದರೆ ಮಾತ್ರ ಹೆಣ್ಣುಗಂಡುಗಳ ಸಮನ್ವಯ ದಾಂಪತ್ಯ ಸಾಧ್ಯವಾದೀತು! ಉಚಿತ ಸಹಾಯವಾಣಿಗೆ ಕರೆಮಾಡಿ: 8494944888.